# ಯಕ್ಷಗಾನ ಪ್ರಸಂಗ ಸಾಹಿತ್ಯ ವಿವೇಚನೆ

ಡಾ.ಶುಭಾ ಮರವಂತೆ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,

ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು ಶಿವಮೊಗ್ಗ.

shubha.maravanthe@gmail.com

ಕರಾವಳಿ ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನ. ಇದು ದೃಶ್ಯ ಕಲೆಯೂ, ಶ್ರವ್ಯ ಕಲೆಯೂ ಹೌದು. ಕಲಾ ಸರಸ್ವತಿ ತನ್ನ ಅಪೂರ್ವ ಲಾವಣ್ಯವನ್ನು ಪ್ರದರ್ಶಿಸುವುದಕ್ಕೆ ಆಯ್ಕೆ ಮಾಡಿಕೊಂಡ ದೈವೀ ಕಲೆ ಈ ಯಕ್ಷಗಾನವೇ ಇರಬಹುದೋ ಏನೋ. ಏಕೆಂದರೆ ಇದೊಂದು ಪರಿಪೂರ್ಣ ಕಲೆ. ಪಾಂಡಿತ್ಯ, ಪ್ರತಿಭೆ, ವಿದ್ವತ್ತು, ಭಾವಾಭಿನಯ, ಆಂಗಿಕಾಭಿನಯ, ಕುಣಿತ, ಮಾತು, ರಾಗ, ತಾಳ ಹೀಗೆ ಪ್ರತಿಯೊಂದು ಒಂದರ ಜೊತೆಗೊಂದು ಬೆರತು ಈ ರಂಗಶಾಲೆಯ ನಿರ್ಮಾಣವಾಗಿದೆ. ಕಲಾವಿದನ ಅಭಿವ್ಯಕ್ತಿ ಪ್ರತಿಯೊಂದು ಸಂದರ್ಭದಲ್ಲೂ ಸ್ವಯಂ ಪ್ರತಿಭೆಯಿಂದಲೇ ಬೆಳಗುತ್ತಾ ಹೋಗುತ್ತದೆ. ಸನ್ನಿವೇಶ ನಿರ್ಮಾಣ ಕೌಶಲಕ್ಕೆ ಪೂರಕವಾಗಿ ಒದಗಿಬರುವ ಪ್ರಸಂಗ ಸಾಹಿತ್ಯವು ಕಲಾವಿದನ ಪ್ರಜ್ಞೆಯ ನಿಯಂತ್ರಕವಾಗಿ ಮೂಡಿ ಬರುತ್ತದೆ. ಹಾಗಾಗಿ ಯಕ್ಷಗಾನದಲ್ಲಿ ಪ್ರಸಂಗ ಸಾಹಿತ್ಯಕ್ಕೆ ಹೆಚ್ಚಿನ ಆದ್ಯತೆಯಿದೆ.

ಕನ್ನಡ ಸಾಹಿತ್ಯದಲ್ಲಿ ಪದ್ಯ ಸಾಹಿತ್ಯ ಪರಂಪರೆಗೆ ಉನ್ನತ ಸ್ಥಾನವಿದೆ. ಕವಿರಾಜಮಾರ್ಗಕಾರ 'ಹಾಡುಗಬ್ಬ', 'ಓದುಗಬ್ಬ'ಗಳೆಂಬ ಎರಡು ಬಗೆಯ ಕಾವ್ಯ ಪ್ರಕಾರಗಳನ್ನು ಹೇಳುತ್ತಾನೆ. ರಾಗ, ತಾಳ, ಬದ್ಧವಾದ ರಚನೆಗಳನ್ನು ಹಾಡುಗಬ್ಬವೆಂದು ಕರೆಯಬಹುದು. ಈ ಪ್ರಕಾರದ ರಚನೆಗಳು ಹರಿದಾಸರ ಕೀರ್ತನೆಗಳಲ್ಲಿ, ಯಕ್ಷಗಾನ ಪದ್ಯಗಳಲ್ಲಿ ಮುಂದುವರಿದುಕೊಂಡು ಬಂದಿರುವುದು ವಿಶೇಷವಾಗಿದೆ. ಯಕ್ಷಗಾನದ ಪದ್ಯಗಳು ಅಥವಾ ಪದಗಳು ಎನ್ನುವ ಪರಿಭಾಷೆಯಲ್ಲಿ ಗುರುತಿಸುವ ಈ ಹಾಡುಗಬ್ಬಗಳು, ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು, ಕವಿಯಕಥನ ಪ್ರಜ್ಞೆಯನ್ನು, ವಿವಿಧ ಬಗೆಯ ರಾಗ–ತಾಳ ಛಂದೋ ವೈವಿಧ್ಯಗಳಿಂದ ಶಾಸ್ತ್ರೀಯ ಗುಣ ಲಕ್ಷಣವನ್ನು ಪಡೆದು ಕರ್ನಾಟಕದ ದೇಸಿ ಪರಂಪರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ. ವಿಶ್ವಮಟ್ಟದಲ್ಲಿ ಜಾನಪದ ದೃಶ್ಯಕಲೆಯಾಗಿ ಪ್ರಸಿದ್ಧಿ ಹೊಂದಿದೆ. ಡಾ. ಶಿವರಾಮ ಕಾರಂತರು ಯಕ್ಷಗಾನವನ್ನು 'ಗಾನ ಸಂಪ್ರದಾಯ'ವೆಂದು ಗುರುತಿಸಿ, 'ಕರ್ನಾಟಕ ಸಂಗೀತ ಪದ್ಧತಿ' ಹುಟ್ಟುವ ಕಾಲಕ್ಕಿಂತಲೂ ಎಷ್ಟೋ ಹಿಂದೆ ಯಕ್ಷಗಾನವುಸುಸಂಬದ್ಧವಾದ, ಪ್ರಭಾವ ಶಾಲಿಯಾದ ವಿಕಸಿತವಾದ ಸಂಗೀತ ಪದ್ಧತಿಯಾಗಿರಬೇಕೆಂದು ತಿಳಿಸುತ್ತಾರೆ.

ಯಕ್ಷಗಾನ ಸಾಹಿತ್ಯ ಮೂಲತಃ ಪದ್ಯ ಸಾಹಿತ್ಯ. ಇದನ್ನು ರಚಿಸುವವನಿಗೆ ಪ್ರಸಂಗಕರ್ತ ಅಥವಾ ಕವಿ ಎಂದು ಕರೆಯಲಾಗುತ್ತದೆ. ಯಕ್ಷಗಾನ ಕೃತಿಯನ್ನು ಪ್ರಸಂಗವೆಂದು ಕರೆಯಲಾಗುತ್ತದೆ. ಇಂಗ್ಲೀಷಿನಲ್ಲಿ ಅದನ್ನು 'Plot'/'Episode' ಎಂದು ಕರೆಯಲಾಗುತ್ತದೆ. ಇದರರ್ಥ, ಅದೊಂದು ಸಮಗ್ರ ಮಹಾಕಾವ್ಯವಲ್ಲ. ರಾಮಾಯಣ, ಮಹಾಭಾರತಗಳಿಂದ ಆಯ್ದ

ಪುಟ್ಟ ಘಟನೆಗಳ ನಿರೂಪಣೆ ಎಂದು ಕರೆಯಬಹುದು. ಇತ್ತೀಚೆಗೆ ಪೌರಾಣಿಕ ಮಾತ್ರವಲ್ಲ, ಐತಿಹಾಸಿಕ, ಸಾಮಾಜಿಕ, ರಾಜಕೀಯ ವಿಷಯ ವಸ್ತುಗಳೂ ಪ್ರಸಂಗಗಳಾಗುತ್ತಿವೆ. ಯಕ್ಷಗಾನ ಕಾವ್ಯಗಳನ್ನು ಖಂಡ ಕಾವ್ಯಗಳೆಂದು ಕರೆಯಬಹುದು. ಆಶ್ಚರ್ಯವೆಂದರೆ ಸಾಹಿತ್ಯ ದೃಷ್ಟಿಯಲ್ಲಿ ಇದು ಮಹಾಕಾವ್ಯ ಅನ್ನಿಸಿಕೊಳ್ಳದಿದ್ದರೂ ಅದರ ಅನೇಕ ಗುಣಲಕ್ಷಣಗಳು ಮಹಾಕಾವ್ಯ ಪದ್ಧತಿಯನ್ನು ಹೋಲುತ್ತವೆ.

ಪಂಪನ 'ವಿಕ್ರಮಾರ್ಜುನ ವಿಜಯ', ರನ್ನನ 'ಗದಾಯುದ್ಧ', ಕುಮಾರ ವ್ಯಾಸನ 'ಕರ್ಣಾಟಕ ಭಾರತ ಕಥಾಮಂಜರಿ' ಇವುಗಳನ್ನೆಲ್ಲಾ ನಾವು ಮಹಾಕಾವ್ಯಗಳೆಂದು ಕರೆಯುತ್ತೇವೆ. ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ಉನ್ನತ ಸ್ಥಾನವನ್ನು ನೀಡುತ್ತೇವೆ. ಆದರೆ ಯಕ್ಷಗಾನ ರಚನೆಗಳಿಗೆ ಇಂತಹ ಮನ್ನಣೆ ಯಾಕಿಲ್ಲ? ಎಂಬ ಪ್ರಶ್ನೆ ನಮಗೆ ಎದುರಾಗುತ್ತವೆ. ಯಕ್ಷಗಾನ ಕಾವ್ಯಗಳು ಮೇಲೆ ಹೇಳಿದ ಕಾವ್ಯಗಳಿಗಿಂತ ಸ್ವಲ್ಪ ಭಿನ್ನವೂ ವಿಶಿಷ್ಟವೂ ಆಗಿರುವುದು ವಿಶೇಷ. ಪಂಪರನ್ನರ ಕಾವ್ಯಗಳು ಶಿಷ್ಟ ಕಾವ್ಯಗಳೆಂದೂ, ಯಕ್ಷಗಾನ ಕಾವ್ಯಗಳನ್ನು ಜನಪದ ಕಾವ್ಯಗಳೆಂದೂ ವಿಂಗಡಿಸಿ ಅದರ ಮೌಲಿಕತೆಯನ್ನು ಕಡೆಗಣಿಸಲಾಗಿದೆ. ಯಕ್ಷಗಾನ ಪದ್ಯಗಳು ಸರಳವೂ, ಭಾವಾಭಿವ್ಯಕ್ತಿಗೆ ಮೂಲವೂ ಆಗಿರುವುದನ್ನು ಕಾಣುತ್ತೇವೆ. ಅಲ್ಲದೆ ಈ ಪದ್ಯಗಳು ತಾಳ, ಲಯ, ರಾಗ ಪ್ರಧಾನವಾಗಿರುವುದರಿಂದ ಹಾಡುಗಾರನ ಭಾವವೇ ಸನ್ನಿವೇಶದ ಚಿತ್ರಣವನ್ನು ನಮ್ಮ ಕಲ್ಪನೆಯಲ್ಲಿ ಮೂಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಸಂಗಕರ್ತ, ಕಲಾವಿದರ ನಂಟು ಈ ರಚನೆಗಳಲ್ಲಿ ಒಟ್ಟಿಗಿದ್ದು ಇದೊಂದು 'ಸಮೂಹ ಕಲೆ' (Mass Art) ಎನ್ನುವಷ್ಟು ಜನ ಪ್ರಸಿದ್ಧಿ ಪಡೆದುಕೊಂಡಿದೆ. ಆದರೆ ಇದು ಆಸ್ಥಾನ ಕಲೆಯಾಗಿ ರೂಪುಗೊಳ್ಳದೆ ಜನಸಾಮಾನ್ಯರ ಕಲೆಯಾಗಿ ರೂಪುಗೊಂಡಿರುವುದರಿಂದಲೇ ಪಂಡಿತ ಪರಂಪರೆ ಈ ಸಾಹಿತ್ಯ ಪ್ರಕಾರವನ್ನು ಉಪೇಕ್ಷಿಸಿದೆ. ಯಾವಾಗ ಯಕ್ಷಗಾನ ಪದ್ಯಗಳು ಭಾಗವತನೆಂಬ ಹಾಡುಗಾರನ ಕಂಠಶ್ರೀಯಲ್ಲಿ ಅನುರಣಿಸಿತೋ ಆಗ ಆಸ್ಥಾನ ಕಾವ್ಯಗಳನ್ನು ಗಮಕ ಕಲೆಯ ಮೂಲಕ ಪ್ರಚಾರಕ್ಕೆ ತರುವ ಪ್ರಯತ್ನ ಮಾಡಲಾಯಿತು. ಈ ದೃಷ್ಟಿಯಿಂದ ಗಮಕ ಕಲೆಯ ಹುಟ್ಟು, ಆ ಪ್ರಚಾರಕ್ಕೆ ಯಕ್ಷಗಾನವೂ ಒಂದು ದೃಷ್ಟಿಯಿಂದ ಪ್ರೇರಕ, ಪೋಷಕವಾಯಿತು.

ಮೇಲೆ ಹೇಳಿದ ಹಾಗೆ ಯಕ್ಷಗಾನವು ಭಾವಾಭಿವ್ಯಕ್ತಿಗೆ ವ್ಯಂಜಕವಾದ ಒಂದು ಕಲೆ; ರಂಜಕವಾದ ಕಲೆ. ಇದಕ್ಕೆ ಪೂರಕವಾಗಿ ಪ್ರಸಂಗ ಸಾಹಿತ್ಯವಿರಬೇಕು. ರಂಗಪ್ರಜ್ಞೆ ಹಾಗೂ ಕಾವ್ಯಾನುಭೂತಿ ಇವೆರಡರ ಸಂಯೋಜನೆಯನ್ನು ಯಕ್ಷಗಾನ ಕೃತಿ ಪಡೆದಿರಬೇಕಾಗುತ್ತದೆ.

1. ಕನ್ನಡ ಸಾಹಿತ್ಯ ಚರಿತ್ರೆಯನ್ನು ನಾವು ಈಗಿರುವ ರೂಪದಲ್ಲಿ ಸ್ವೀಕರಿಸಬೇಕೋ ಅಥವಾ ಬೇಡವೋ ಎಂಬ ಚರ್ಚೆ ಸಾಹಿತ್ಯವಲಯದಲ್ಲಿ ರೂಪುಗೊಂಡಿದೆ. ಈಗಿರುವ ಪ್ರಕಾರ ಪಂಪಪೂರ್ವಯುಗ, ಪಂಪಯುಗ, ಬಸವಯುಗ, ಕುಮಾರವ್ಯಾಸ ಯುಗ, ಹೊಸಗನ್ನಡ ಸಾಹಿತ್ಯಯುಗವೆಂದು ಪರಿಭಾವಿಸುವ ಚರಿತ್ರೆಯ ಕ್ರಮದಲ್ಲಿಯೇ ನ್ಯೂನ್ಯತೆಯಿದೆ. ಒಂದು ನಿಶ್ಚಿತ ಕಾಲಘಟ್ಟದ ಹಿನ್ನೆಲೆಯಲ್ಲಿ ಇತಿಹಾಸವನ್ನು ರೂಪಿಸುವಾಗ ಅಲ್ಲಿರುವ ಪ್ರಧಾನ ಕವಿಯನ್ನೇ ಮಾನದಂಡವಾಗಿ ಮಾಡಲಾಗುತ್ತದೆ. ಆಗ ಉಳಿದ ಕವಿಗಳ ಪ್ರಕಾರಗಳು ಹಿಂದೆ ಬೀಳುವ ಸಾಧ್ಯತೆಗಳು

ಹೆಚ್ಚಾಗಿವೆ. ಆದ್ದರಿಂದ ಕನ್ನಡ ಸಾಹಿತ್ಯ ಚರಿತ್ರೆಯ ಸುಧಾರಿತ ಕ್ರಮ ವಿಂಗಡಣೆಯಲ್ಲಿ ಯಕ್ಷಗಾನ ಸಾಹಿತ್ಯಕ್ಕೂ ಮನ್ನಣೆ ಸಲ್ಲಬೇಕಾದುದು ಅನಿವಾರ್ಯವಾಗುತ್ತದೆ. ಈ ದೃಷ್ಟಿಯಿಂದ ಚರಿತ್ರೆಯಲ್ಲಿ ಮನ್ನಣೆಯನ್ನು ಪಡೆಯುವ ಅರ್ಹತೆ ಯಕ್ಷಗಾನ ಸಾಹಿತ್ಯಕ್ಕಿದೆ ಎನ್ನುವುದನ್ನು ತೆರೆದು ತೋರಿಸುವುದು ಈ ಸಂಶೋಧನ ಅಧ್ಯಯನದ ಪ್ರಧಾನ ಉದ್ದೇಶವಾಗಿದೆ.

2. ಇದಕ್ಕೆ ಪೂರಕವಾಗಿ ಕರಾವಳಿ ಯಕ್ಷಗಾನ ಪ್ರಸಂಗ ಸಾಹಿತ್ಯದ ಹುಟ್ಟು, ಬೆಳವಣಿಗೆ, ಪ್ರಾಚೀನ ಪ್ರಮುಖ ಕವಿಗಳನ್ನು ಗುರುತಿಸಿ ಅವರ ಸಾಹಿತ್ಯದ ಮೌಲಿಕತೆಯನ್ನು ಗುರುತಿಸುವುದು.
3. ಯಕ್ಷಗಾನ ಪ್ರಸಂಗ ಸಾಹಿತ್ಯದ ವಿನ್ಯಾಸಕ್ರಮ, ಛಂದಸ್ಸು, ಅಲಂಕಾರ, ರಸ ವಿಮರ್ಶೆಗೆ ಪ್ರೇರಕವಾದ ಅಂಶಗಳನ್ನು ಗುರುತಿಸುವುದು.
4. ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಪ್ರಸಂಗಗಳನ್ನು ಸೂಕ್ಷ್ಮ ಅಧ್ಯಯನದ ಕ್ರಮಕ್ಕೆ ಅಳವಡಿಸಿ ನೋಡುವುದು. ಇದರಿಂದ ಯಕ್ಷಗಾನ ಪ್ರಸಂಗಗಳು ಕಲಾವಿದನ ಬೆಂಬಲವಿಲ್ಲದೆ ಓದುವುದಕ್ಕೆ, ಅರ್ಥೈಸುವುದಕ್ಕೆ ಸಾಧ್ಯವೆನ್ನುವುದನ್ನು ಅರಿಯುವುದು.
5. ಶೈಕ್ಷಣಿಕ ಪಠ್ಯಕ್ರಮದಲ್ಲಿ ಯಕ್ಷಗಾನ ಪ್ರಸಂಗ, ಸಾಹಿತ್ಯವನ್ನು ನಿಗದಿಗೊಳಿಸುವುದರಿಂದ ಅದರ ಮೌಲ್ಯ ವಿವೇಚನೆಗೆ ಅವಕಾಶ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಸಾಹಿತ್ಯದ ಅಧ್ಯಯನದ ಪರ್ಯಾಯ ಕ್ರಮವೊಂದನ್ನು ಪ್ರಾಯೋಗಿಕವಾಗಿ ಪರಿಚಯಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ.
6. ಕನ್ನಡ ಭಾಷಾ ಬೆಳವಣಿಗೆಗೆ ಮತ್ತು ಅದರ ಗ್ರಾಂಥಿಕ ಸ್ವರೂಪಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಳ್ಳುವ ಬಹುದೊಡ್ಡ ಹೊಣೆಯನ್ನು ಯಕ್ಷಗಾನ ಪ್ರಸಂಗ ಸಾಹಿತ್ಯ ಹಾಗೂ ಅದರ ವಾಚಿಕೆಗಳು ನಿರ್ವಹಿಸುತ್ತಿದೆ. ಇಂಗ್ಲೀಷ್ ಭಾಷಾ ಬಳಕೆ ಇಲ್ಲದೆ ಕೇವಲ ಕನ್ನಡದಲ್ಲೇ ಮಾತನಾಡುವ ಮೂಲಕ ಕನ್ನಡ ಭಾಷೆ, ಸಂಸ್ಕೃತಿಗೆ ಯಕ್ಷಗಾನ ಪ್ರಸಂಗ ಸಾಹಿತ್ಯದ ಕೊಡುಗೆಯನ್ನು ನಿಷ್ಕರ್ಷಿಸುವುದು ಕೂಡ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

**ಯಕ್ಷಗಾನದ ಹುಟ್ಟು ಬೆಳವಣಿಗೆ – ಪ್ರಸಂಗ ಸಾಹಿತ್ಯದ ಪ್ರಾಚೀನತೆ**

ಪ್ರಸಂಗ ಸಾಹಿತ್ಯವು ಪ್ರಸಂಗಕಾರನ ಪರಿಸರ, ಬೌದ್ಧಿಕ ಸಾಮರ್ಥ್ಯ, ಪ್ರತಿಭೆ, ದೃಷ್ಟಿಕೋನ, ಸಾಮಾಜಿಕ ಸ್ಪಂದನೆ ಈ ಎಲ್ಲಾ ಸಾಂಸ್ಕೃತಿಕ ಘಟಕಗಳ ಒಂದು ಸಾಮೂಹಿಕ ಅಭಿವ್ಯಕ್ತಿಯಾಗಿರುತ್ತದೆ. ಆದ್ದರಿಂದ ಒಂದು ಪ್ರಸಂಗಕಾರ ಏಕಕಾಲದಲ್ಲಿ ಈ ಎಲ್ಲಾ ಸಾಂಸ್ಕೃತಿಕ ಘಟಕಗಳೊಂದಿಗೆ ಮುಖಾಮುಖಿಯಾಗುತ್ತಲೇ ಒಂದು ಪ್ರಸಂಗ ಸಾಹಿತ್ಯವನ್ನು ರಚಿಸುತ್ತಾನೆ. ಸಾಮಾಜಿಕ ಆಶಯಗಳನ್ನು ಯಕ್ಷಗಾನದಲ್ಲಿ ತರಬಹುದಾದರೂ ಸಾಮಾಜಿಕ ಪಾತ್ರಗಳನ್ನು ತರಲಾಗುವುದಿಲ್ಲ. ತಂದಾಗ ಅದು ಯಕ್ಷಗಾನವಾಗಿ ಉಳಿಯುವುದಿಲ್ಲ.

ಯಾವುದೇ ಪ್ರಸಂಗವನ್ನು ರಚಿಸುವಾಗ ಸಾಹಿತ್ಯವು ಅದರ ಮೂಲ ಪರಿಕರವಾಗಿರುತ್ತದೆ. ಕಥಾವಸ್ತುವೊಂದು ಅದರ ಆಕರವಾಗಿರುತ್ತದೆ. ಮಹಾಭಾರತ, ರಾಮಾಯಣ ಕಾವ್ಯಗಳ ಆಳವಾದ ಪರಿಜ್ಞಾನದ ಮೂಲಕ ಪ್ರಸಂಗದ ಆಕರಗಳು

ದೊರೆತರೆ, ಸಾಹಿತ್ಯ ಪ್ರಜ್ಞೆ ಮತ್ತು ವ್ಯುತ್ಪತ್ತಿ, ಪ್ರತಿಭೆಗಳಿಂದ ಪರಿಕರವು ಒದಗಿ ಬರುತ್ತದೆ. ಸಾಹಿತ್ಯದ ಅಭ್ಯಾಸದ ಸಂದರ್ಭದಲ್ಲಿ ಸಾಹಿತ್ಯವೆಂದು ಯಾವುದನ್ನು ಪರಿಗಣಿಸಬೇಕೆಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಶಿಷ್ಟ ಹಾಗೂ ಜಾನಪದ ಪ್ರಕಾರಗಳನ್ನು ಮಾತ್ರ ಸಾಹಿತ್ಯವೆಂದು ಪರಿಗಣಿಸುವುದನ್ನು ನೋಡಿದರೆ ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಯಾಕೆ ಸಾಹಿತ್ಯದ ಪರಿಗಣನೆಗೆ ತಂದಿಲ್ಲ? ಎಂಬುದು ನಾವು ಯೋಚಿಸಬೇಕಾದ ಅಂಶ. ಸಾಹಿತ್ಯದ ಎಲ್ಲಾ ಸೌಂದರ್ಯಗಳೂ ಛಂದಸ್ಸು, ಬಂಧದ ದೃಷ್ಟಿಯಿಂದಲೂ ಯಕ್ಷಗಾನ ಪ್ರಸಂಗ ಸಾಹಿತ್ಯವು ಇತರ ಸಾಹಿತ್ಯ ಪ್ರಕಾರಗಳಿಗೆ ಪರಿಮಿಗಿಲೆನಿಸಿರುವಾಗ ಅದನ್ನು ಸಾಹಿತ್ಯ ಪ್ರಕಾರವೆಂದು ಪರಿಗಣಿಸಬೇಕಾದ ಅಗತ್ಯವಿದೆ.

ಕರ್ನಾಟಕದ ಕರಾವಳಿ ಯಕ್ಷಗಾನ ಕಲೆಗೆ ಪ್ರಸಿದ್ಧಿ ಪಡೆದ ಜಿಲ್ಲೆ. ಯಕ್ಷಗಾನವು ಜನಪದ ಕಲಾ ಪ್ರಕಾರವಾದರೂ ಶಾಸ್ತ್ರೀಯ ವೈಲಕ್ಷಣ ಹೊಂದಿ ಗೀತ, ನೃತ್ಯ, ವಾದ್ಯವೇ ಮೊದಲಾದ ಪರಿಕರಗಳ ಮೂಲಕ ಅಭಿವ್ಯಕ್ತಗೊಳ್ಳುವ ಕಲೆಯಾಗಿದೆ. ಘಟ್ಟದ ಮೇಲಿನ ಮೂಡಲ ಸೀಮೆಯ ಸಂಪ್ರದಾಯಕ್ಕೆ 'ಮೂಡಲಪಾಯ'ವೆಂದೂ, ಘಟ್ಟದ ಕೆಳಗಣ ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳ ಸಂಪ್ರದಾಯಕ್ಕೆ 'ಪಡುವಲಪಾಯ'ವೆಂದೂ ಕರೆಯುವ ವಾಡಿಕೆಯಿದೆ. ಪಡುವಲಪಾಯದ ಪ್ರಯೋಗ ಭೇದಗಳ ಕಾರಣದಿಂದ ಕಾಸರಗೋಡು, ಮಂಗಳೂರು, ಉಡುಪಿ, ಧರ್ಮಸ್ಥಳದವರೆಗೆ ಚಾಲ್ತಿಯಲ್ಲಿರುವ ಯಕ್ಷಗಾನವನ್ನು 'ತೆಂಕಮಟ್ಟು' ಎಂತಲೂ, ಉಡುಪಿ ಜಿಲ್ಲೆಯ ಕೆಲವು ಭಾಗಗಳು ಮತ್ತು ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದ ಕಡೆ ರೂಢಿಯಾದ ಬಳಕೆಯನ್ನು 'ಬಡಗುಮಟ್ಟು' ಎಂತಲೂ ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯವರು ತಮ್ಮ ಸಂಪ್ರದಾಯವನ್ನು 'ಉತ್ತರದ ಮಟ್ಟು' ಅಥವಾ 'ಹೊನ್ನಾವರದ ತಿಟ್ಟು' ಎಂದೂ ಕರೆದುಕೊಂಡಿದ್ದಾರೆ. ಹಾಗೆ ನೋಡಿದರೆ ಬಡಗು ತಿಟ್ಟಿಗೂ ಉತ್ತರದ ತಿಟ್ಟಿಗೂ ಯಾವ ಪ್ರಮುಖ ವ್ಯತ್ಯಾಸಗಳೂ ಇಲ್ಲ. ಆದರೆ ಬಡಗುತಿಟ್ಟು ತೆಂಕು ತಿಟ್ಟಿಗಿಂತಲೂ ಪ್ರಾಚೀನವೆಂದು ಡಾ. ಎಂ. ಪ್ರಭಾಕರ ಜೋಶಿಯವರು ಅಭಿಪ್ರಾಯಪಡುತ್ತಾರೆ. ಮುಖ್ಯವಾಗಿ ಇದೊಂದು ರಂಗ ಕಲೆ. ಉತ್ತರ ಕರ್ನಾಟಕದಲ್ಲಿ ಈ ಬಗೆಯ ರಂಗ ತಂತ್ರಕ್ಕೆ ದೊಡ್ಡಾಟ, ಸಣ್ಣಾಟ, ಪಾರಿಜಾತ, ಸಂಗ್ಯಾ ಬಾಳ್ಯಾ ಎಂಬ ಹೆಸರಿದೆ. ತುಮಕೂರಿನಲ್ಲಿ ಕರಿಭಂಟನ ಕಾಳಗವೆಂದೂ, ಮಲೆನಾಡಿನಲ್ಲಿ 'ಭಾಗವತರ ಆಟ'ವೆಂದೂ, ಕರಾವಳಿಯಲ್ಲಿ ಆಟ, ದಶಾವತಾರ ಆಟ, ಮೇಳದ ಆಟ, ತಿರುಗಾಟವೆಂದೂ ಕರೆಯುತ್ತಾರೆ.

**ಯಕ್ಷಗಾನದ ಪ್ರಾಚೀನತೆ:**

ಇದುವರೆಗೆ ದೊರೆತ ಆಧಾರಗಳ ಮೇಲೆ ಯಕ್ಷಗಾನದ ಇತಿಹಾಸವು ನಮಗೆ ನಿಚ್ಚಳವಾಗಿ ದೊರೆಯುವುದು 16ನೇ ಶತಮಾನದ ನಂತರವೆ. ಕನ್ನಡ, ಆಂಧ್ರ, ತಮಿಳು ಯಕ್ಷಗಾನಗಳೆಲ್ಲ 15ನೇ ಶತಮಾನಕ್ಕಿಂತ ಈಚಿನವೇ ಆಗಿವೆ. ಯಕ್ಷಗಾನದ ಹುಟ್ಟನ್ನು ಕುರಿತು ವಿದ್ವಾಂಸರಲ್ಲಿ ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಯಕ್ಷಗಾನವು ಮೂಲತ: ಬಂದದ್ದು ಎಲ್ಲಿಂದ? ಆಂಧ್ರದಿಂದಲೋ ಅಥವಾ ಕರ್ನಾಟಕದಿಂದಲೋ? ಕುಕ್ಕಿಲ ಕೃಷ್ಣ ಭಟ್ಟರು ಯಕ್ಷಗಾನವು ಆಂಧ್ರಮೂಲೀಯವೆನ್ನುತ್ತಾ, ಈ ಕೆಳಗಿನ ಅಭಿಪ್ರಾಯವನ್ನು ಮಂಡಿಸುತ್ತಾರೆ:

ದ್ವಿಪದಿ ತೆಲುಗು ಮೂಲದ ಛಂದಸ್ಸಾಗಿದ್ದು ತೆಲುಗು ಕಾವ್ಯದಲ್ಲಿ ಅದು ಹೆಚ್ಚು ಛಂದಸ್ಸಿನಲ್ಲಿ ರಚನೆಗೊಂಡಿಲ್ಲ. ನಮ್ಮ ಯಕ್ಷಗಾನಗಳಲ್ಲಿ ದ್ವಿಪದಿ ಬಳಕೆಯಾಗಿದ್ದು ಅದು ತೆಲುಗಿನ ಪ್ರಭಾವವೆಂಬುದು ಸ್ಪಷ್ಟ. ಸೌರಾಷ್ಟ್ರ ತ್ರಿವುಡೆ, ಶಂಕರಾಭರಣ ತ್ರಿವುಡೆ, ಮಧ್ಯಮಾವತಿ ತ್ರಿವುಡೆ ಮುಂತಾದ ಹೆಸರುಳ್ಳ ಪದ್ಯ ಬಂಧಗಳು ಮೂಲತಃ ತೆಲುಗಿನವುಗಳು. ಈ ಬಗೆಯ ರೂಪಗಳು ಅನೇಕ ತೆಲುಗು ಕಾವ್ಯಗಳಲ್ಲಿವೆ. ಛಂದೋಗ್ರಂಥಗಳಲ್ಲೂ ಉಲ್ಲೇಖಿಸಲ್ಪಟ್ಟಿವೆ. ಸಭಾಲಕ್ಷಣದ ಪ್ರಾರ್ಥನೆ ಮಂಗಲಾಚರಣೆ ಪದ್ಯಗಳು ತಿರುಪತಿ ಅಣ್ಣಮಾಚಾರ್ಯರ ರಚನಾಸಂಪ್ರದಾಯಕ್ಕೆ ಸೇರಿವೆ. ಅವರು ತೆಲುಗಿನ ಪ್ರಸಿದ್ಧ ವಾಗ್ಗೇಯಕಾರರಾಗಿದ್ದು ತೆಲುಗು ಯಕ್ಷಗಾನ ಲಕ್ಷಣವನ್ನೂ ತಿಳಿಸಿದವರಾಗಿದ್ದರು. ಬಡಗುತಿಟ್ಟು ಯಕ್ಷಗಾನದ ವೇಷಭೂಷಣಗಳು ಆಂಧ್ರ ಯಕ್ಷಗಾನವನ್ನು  ಹೋಲುತ್ತವೆ. ಯಕ್ಷಗಾನದ ಉಲ್ಲೇಖ ಮೊತ್ತಮೊದಲಿಗೆ ತೆಲುಗಿನ ಶ್ರೀನಾಥಕವಿಯ (೧೪೩೦) ಭೀಮೇಶ್ವರಪುರಾಣದಲ್ಲಿ ದೊರೆಯುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ.

ಆದರೆ ಕುಕ್ಕಿಲರ ವಾದವನ್ನು ವಸಂತ ಭಾರದ್ವಾಜರು ಒಪ್ಪುವುದಿಲ್ಲ. ದ್ವಿಪದಿಗಳು ಲಲಿತ ರಗಳೆಯ ಪ್ರಭೇದ, ಇದು ಕನ್ನಡಕ್ಕೆ ವಿಶಿಷ್ಟ. ತ್ರಿವುಡೆ ಛಂದಸ್ಸೂ ಕನ್ನಡದ್ದೇ ಆಗಿದೆ. ಅಣ್ಣಮಾಚಾರ್ಯರ ಮೇಲೆ ಕನ್ನಡದ ಶ್ರೀಪಾದರಾಜರ ಪ್ರಭಾವವಿದೆ. ವೇಷಭೂಷಣಗಳು ತೆಲುಗಿನಿಂದ ಪ್ರಭಾವಿತವಾಗಿಲ್ಲ. ಮಾಧ್ವಮತದ ಪ್ರಭಾವ ಇಲ್ಲಿದೆ. ಶ್ರೀನಾಥ ಕವಿಗಿಂತಲೂ ಹಿಂದೆ ಅಂದರೆ ೧೩ನೇ ಶತಮಾನದಲ್ಲೇ 'ಆದಿಪರ್ವ' ಯಕ್ಷಗಾನ ಕೃತಿ ಕನ್ನಡದಲ್ಲಿ ದೊರೆತಿದೆ ಎನ್ನುವುದರ ಮೂಲಕ ತೆಲುಗು ಮೂಲವೆಂಬ ವಾದವನ್ನು ಅಲ್ಲಗೆಳೆಯುತ್ತಾರೆ. ಕನ್ನಡ ಮೂಲದ ಸಿದ್ಧಾಂತ ಮಂಡಿಸುತ್ತಾರೆ.

ಡಾ. ಕೋಟ ಶಿವರಾಮ ಕಾರಂತರು ತಮ್ಮ 'ಯಕ್ಷಗಾನ ಬಯಲಾಟ' ಕೃತಿಯಲ್ಲಿ "ಕ್ರಿ.ಶ ೧೫೦೦ಕ್ಕಿಂತಲೂ ಮುಂಚಿತವಾಗಿ ಯಕ್ಷಗಾನ ಪ್ರಸಂಗ ಸಾಹಿತ್ಯ ನಮಗೆ ದೊರಕಿಲ್ಲ: ಅಂಥದಿದ್ದರೂ, ಅವುಗಳ ಕಾಲ ನಿರ್ಣಯಕ್ಕೊದಗುವ ಸಾಕ್ಷಿಗಳು ದೊರಕುವುದಿಲ್ಲವಾದುದರಿಂದ ಏನೂ ಆ ವಿಚಾರ ಹೇಳಲು ಬರುವಂತಿಲ್ಲ" ಎಂದಿದ್ದಾರೆ. ಯಕ್ಷಗಾನದ ಬಗ್ಗೆ ಬಹುವಿಸ್ತೃತ ಅಧ್ಯಯನ ಮಾಡಿದ ಕಾರಂತರ ಮಾತು ಒಪ್ಪಬಹುದಾದರೂ ಪ್ರಸಂಗ ರಚನೆಯಾಗಿರಬಹುದಾದ ಸಾಧ್ಯತೆಯನ್ನೂ ತಳ್ಳಿಹಾಕಲಾಗುವುದಿಲ್ಲ. ಏಕೆಂದರೆ ದಾಸ ಸಾಹಿತ್ಯವೂ ಯಕ್ಷಗಾನ ಸಾಹಿತ್ಯವೂ ಜೊತೆ ಜೊತೆಯಾಗಿ ಬೆಳೆದು ಬಂದಿರುವುದಕ್ಕೆ ನಮಗೆ ಅಲ್ಲಲ್ಲಿ ಕೆಲವು ಮಾಹಿತಿಗಳು ದೊರೆಯುತ್ತವೆ. ದ್ವೈತ ಸಿದ್ಧಾಂತದ ಪ್ರತಿಪಾದನೆಗಾಗಿ ಯಕ್ಷಗಾನವೂ ಕೀರ್ತನೆಗಳೂ ಒಟ್ಟಾಗಿ ಕೆಲಸ ಮಾಡಿವೆ. ವಿಷ್ಣುವಿನ ದಶಾವತಾರಗಳ ವರ್ಣನೆ ಮಡುವುದಕ್ಕಾಗಿಯೇ 'ದಶಾವತಾರ ಮೇಳ'ಗಳು ಹುಟ್ಟಿಕೊಂಡಿವೆ. ಹರಿಪಾರಮ್ಯದ ಪ್ರತಿಪಾದನೆಯೇ ಯಕ್ಷಗಾನದ ಪ್ರಮುಖ ಧ್ಯೇಯವಾಗಿರುವುದಂತೂ ಸುಸ್ಪಷ್ಟ. ಮಧ್ವಾಚಾರ್ಯರ ನೇರ ಶಿಷ್ಯರಾದ ನರಹರಿತೀರ್ಥರು (ಕ್ರಿ.ಶ ೧೨೮೧) ಮೊತ್ತ ಮೊದಲು ಕನ್ನಡದಲ್ಲಿ ಕೀರ್ತನೆಗಳನ್ನು ಬರೆದವರು. ಅವರ ನಂತರ ಈ ಕಾರ್ಯವನ್ನು ಮುಂದುವರಿಸಿದವರು ಶ್ರೀಪಾದರಾಜರು. ನರಹರಿತೀರ್ಥರೆ ಯಕ್ಷಗಾನ ಕಲೆಯ ದ್ರಷ್ಟಾರರೂ ಆಗಿರುವ ಸಾಧ್ಯತೆಯಿದೆ. ಜಾನಪದ ಕಲಾ ಪ್ರಕಾರವೊಂದಕ್ಕೆ ಶಾಸ್ತ್ರೀಯ ಚೌಕಟ್ಟು ನೀಡಿದರೂ ಅವರೇ ಎಂಬ ಊಹನೆಗೂ ಇಲ್ಲಿ ಅವಕಾಶವಿದೆ. ಅನಂತರ ಶ್ರೀಪಾದರಾಜ – ವ್ಯಾಸರಾಯರ ಕಾಲದಲ್ಲಿ ದಾಸ ಸಾಹಿತ್ಯ, ಯಕ್ಷಗಾನ ಸಾಹಿತ್ಯಗಳೆರಡೂ ಒಟ್ಟಿಗೆ ಉಚ್ಛ್ರಾಯ ಸ್ಥಿತಿಗೆ ಬಂದಿರಬಹುದು.

ಸದ್ಯಕ್ಕೆ ದೊರೆತಿರುವ ಯಕ್ಷಗಾನದ ಅತಿ ಪ್ರಾಚೀನ ಕಾವ್ಯ 'ಆದಿಪರ್ವ'. ಅದರ ಪ್ರತಿ ಉತ್ತರ ಕನ್ನಡದ ಸಿದ್ಧಾಪುರ ತಾಲೂಕಿನ ಹೇರೂರು ಕಂಚಿಮನೆಯಲ್ಲಿ ದೊರೆತಿದೆ. ಇದನ್ನು ರಚಿಸಿದಕಾಲ ಹಾಗೂ ಕೃತಿಕಾರನ ಪರಿಚಯ ದೊರೆಯುವುದಿಲ್ಲ. ಹಳೆಯ ರಾಗಗಳ ಹೆಸರು ಈ ಕೃತಿಯಲ್ಲಿ ದೊರೆಯುತ್ತದೆ. ಸಾಂಗತ್ಯ, ವಚನ, ದ್ವಿಪದಿಗಳು ಇದರಲ್ಲಿ ಅಧಿಕವಾಗಿವೆ. ೧೪೮೦ರಲ್ಲಿ ಕೆಂಪಣ್ಣಗೌಡ ನೆಂಬುವನು ಕರಿಬಂಟನ ಕಾಳಗವೆಂಬ ಕೃತಿರಚನೆ ಮಾಡಿದ್ದಾನೆಂಬುದು ಸಂಶೋಧಕರ ತೀರ್ಮಾನ. ಒಂದೊಮ್ಮೆ ನರಹರಿತೀರ್ಥರ ಕಾಲದಲ್ಲಿಯೇ ಯಕ್ಷಗಾನ ಸಾಹಿತ್ಯ ಕೃತಿಗಳ ರಚನೆಯಾಗಿದ್ದರೆ, ಅದರ ಪ್ರಾಚೀನತೆ ಕ್ರಿ.ಶ ೧೨೮೧ರಷ್ಟು ಹಿಂದೆ ಹೋಗುತ್ತದೆ. ಒಟ್ಟಿನಲ್ಲಿ ಕನ್ನಡ ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಉನ್ನತ ಸ್ಥಾನವಿರುವುದು ಸ್ಪಷ್ಟ.

ಗ್ರಂಥಋಣ:

೧. ಡಾ. ಎಂ ಪ್ರಭಾಕರ ಜೋಶಿ, ಯಕ್ಷಗಾನ ಪದಕೋಶ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ ಎಂ. ಜಿ. ಎಂ. ಕಾಲೇಜು ಉಡುಪಿ (೧೯೯೪)
೨. ಯಕ್ಷಗಾನ ಛಂದಸ್ಸು ಒಂದು ಅಧ್ಯಯನ: ಡಾ ಕಬ್ಬಿನಾಲೆ ವಸನ್ತ ಭಾರದ್ವಾಜ: (೧೯೯೮)
೩. ಡಾ.ಕೆ.ಶಿವರಾಮಕಾರಂತ: 'ಯಕ್ಷಗಾನ ಬಯಲಾಟ' (೨೦೦೭)
೪. ಡಾ.ಮೋಹನ ಕುರಿಟಾರ್, ಯಕ್ಷಗಾನ ವಾಚಿಕಾಧ್ಯಯನ, ಪುಟಸಂಖ್ಯೆ:೨೨ (೨೦೦೦)
೫. ಯಕ್ಷಗಾನ ಕವಿ–ಕಾವ್ಯ ವಿಹಾರ: ಭಾಗ–೧: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಯಕ್ಷ ಗುರುಕುಲ ಶಿಕ್ಷಣ ಟ್ರಸ್ಟ್ ಹಯಗ್ರೀವನಗರ, ಉಡುಪಿ – ೦೩ (೨೦೧೦)